715 (915) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1 4 2000 ರಿಂದ ಈವರೆಗೆ ಜಮಖಂಡಿ ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಯಿಂದ ಜೀರ್ಣೋದ್ಧಾರಗೊಂಡ ಮಂದಿರಗಳ ಸಂಖ್ಯೆ ಎಷ್ಟು , ಅವುಗಳಿಗೆ ತಗಲುವ ವೆಚ್ಚವೆಷ್ಟು , (ವಿವರ ಒದಗಿಸುವುದು) ,

ಆ) ಈ ತಾಲ್ಲೂಕಿನಲ್ಲಿ ಬಹಳ ಐತಿಹಾಸಿಕ ಮಂದಿರಗಳಿರುವುದು ಸರ್ಕಾರಕ್ಕೆ ತಿಳಿದಿದೆಯೇ , ಹಾಗಿದ್ದಲ್ಲಿ, ಅವುಗಳನ್ನು ಜೀರ್ಣೋದ್ಧಾರ ಮಾಡಲು ಹಣ ಬಿಡುಗಡೆ ಮಾಡಲಾಗುವುದೇ ,

ಇ) ಪ್ರತಿ ವರ್ಷ ಈ ಕಾರ್ಯಕ್ರಮಕ್ಕೆ ಇಲಾಖೆಯಿಂದ ಮಾಡುವ ಖರ್ಚು ಎಷ್ಟು , (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ 1 4 2000 ರಿಂದ 2006–07ನೇ ಸಾಲಿನಲ್ಲಿ ಈವರೆವಿಗೆ ಒಟ್ಟು 15 ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ 4 00 ಲಕ್ಷ ರೂ ಗಳ ಅನುದಾನವನ್ನು ಬಿಡುಗಡೆ ಮಾಡಿದೆ (ಪಟ್ಟಿ ಲಗತ್ತಿಸಿದೆ)

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಐತಿಹಾಸಿಕ ಹಾಗೂ ಪುರಾತನ ಹಿನ್ನೆಲೆಯುಳ್ಳ ಪಾರಂಪಾರಿಕ ದೇವಸ್ಥಾನಗಳನ್ನು ಸಂರಕ್ಷಿಸುವ ಸಲುವಾಗಿ ಕರ್ನಾಟಕ ಸಾಂಸ್ಕೃತಿಕ ಸಂರಕ್ಷಣಾ ಸೊಸೈಟಿಯನ್ನು ದಿನಾಂಕ 29 1 2007ರಂದು ರಚಿಸಲಾಗಿದ್ದು, ಈ ಯೋಜನೆಯ ಅನುಷ್ಠಾನಕ್ಕಾಗಿ 2006–07ನೇ ಸಾಲಿನಲ್ಲಿ ರೂ 200 00 ಲಕ್ಷ ಅನುದಾನವನ್ನು ಒದಗಿಸಲಾಗಿದೆ ಈ ಯೋಜನೆಯಡಿ ಸದರಿ ಸೊಸೈಟಿ ವತಿಯಿಂದ ಪಾರಂಪಾರಿಕ ಹಿನ್ನಲೆಯುಳ್ಳ ಸ್ಥಳಗಳನ್ನು ಗುರುತಿಸಿ ಮುಂದಿನ ವರ್ಷಗಳಲ್ಲಿ ಅಭಿವೃದ್ಧಿಪಡಿಸಲಾಗುವುದು

ಇ) ರಾಜ್ಯದ ಧಾರ್ಮಿಕ ಸಂಸ್ಥೆಗಳ ಜೀರ್ಣೋದ್ಧಾರಕ್ಕಾಗಿ ಪ್ರಸಕ್ತ ವರ್ಷವು ಆಯವ್ಯಯದಲ್ಲಿ ರೂ 698 85 ಲಕ್ಷಗಳ ಮೊತ್ತವನ್ನು ಅಳವಡಿಸಲಾಗಿದೆ ಜಿಲ್ಲಾವಾರು ಮೊತ್ತವನ್ನು ನಿರ್ದಿಷ್ಟವಾಗಿ ಅಳವಡಿಸಿರುವುದಿಲ್ಲ

3 4/4

ಜಿಲ್ಲಾಧಿಕಾರಿಗಳವರಿಂದ, ಮಾನ್ಯ ಸಚಿವರುಗಳಿಂದ ಹಾಗೂ ಮಾನ್ಯ ಶಾಸಕರುಗಳಿಂದ ಅನುದಾನ ಕೋರಿ ಬಂದಂತಹ ಪ್ರಸ್ತಾವನೆಗಳಿಗೆ ಅನುಗುಣವಾಗಿ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಅರ್ಹ ಸಂಸ್ಥೆಗಳಿಗೆ ಅನುದಾನವನ್ನು ಮಂಜೂರು ಮಾಡಲಾಗುವುದು

2001-02 ರಿಂದ 2005-06ರವರೆಗೆ ಜಮಖಂಡಿ ತಾಲ್ಲೂಕಿನ ದೇವಸ್ಥಾನಗಳಿಗೆ ಮಂಜೂರಾದ ಅನುದಾನದ ವಿವರ

ಕ್ರಸಂ	ದೇವಸ್ಥಾನದ ಹೆಸರು	ತಾಲ್ಲೂಕು	ಮೊತ್ತ
1	ರಾಮಪ್ಪ ಸೀಲಕರೇಶ್ವರ ದೇವಸ್ಥಾನ, ರಿಬಕಲಿ, ಬಸಹಟ್ಟಿ	ಜಮಖಂಡಿ	30,000/-
2	ಶ್ರೀ ಮಲ್ಲಿಕಾರ್ಜುನ ಅಕ್ಕ ಮಹಾದೇವಿ ಟ್ರಸ್ಟ್ ಸಮಿತಿ, ಹಲ್ಲಾಳ	"	25000/-
3	ಶ್ರೀ ಬಿರಪ ದೇವರ ದೇವಸ್ಥಾನ, ಸಾವಳಗಿ	"	25 000/-
4	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ, ಕಾಚಬಿಂಚಗಿ		25 000/-
5	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ, (ಕಲ್ಲುಟ್ಟಿ) ಹೀರಾಳ		20 000/-
6	ಶ್ರೀ ಶಿವಲಿಂಗೇಶ್ವರ ದೇವಸ್ಥಾನ, ಹೀರಾಳ	"	25 000/-
7	ಶ್ರೀ ದಾನಮ್ಮ ದೇವಸ್ಥಾನ, ಜಮಖಂಡಿ	"	25 000/-
8	ಶ್ರೀ ಬನಶಂಕರಿ ದೇವಸ್ಥಾನ, ಜಮಖಂಡಿ	"	25 000/-
9	ಶ್ರೀ ದಿನ [illegible]		25 000/-
10	ಶ್ರೀ ಬೀರದೇವರ ದೇವಸ್ಥಾನ ಸಾವಳಗಿ	"	25 000/-
	ಒಟ್ಟು		2.50 000/-

2006-07ರಲ್ಲಿ ಜಮಖಂಡಿ ತಾಲ್ಲೂಕಿನ ದೇವಸ್ಥಾನಗಳಿಗೆ ಮಂಜೂರಾದ ಅನುದಾನದ ವಿವರ

ಕ್ರಸಂ	ದೇವಸ್ಥಾನದ ಹೆಸರು	ತಾಲ್ಲೂಕು	ಮೊತ್ತ
1	ಶ್ರೀ ಶಿವಲಿಂಗೇಶ್ವರ ದೇವಸ್ಥಾನ, ಜಮಖಂಡಿ	ಜಮಖಂಡಿ	25 000/-
2	ಶ್ರೀ ಶಿವಲಿಂಗೇಶ್ವರ ದೇವಸ್ಥಾನ, ಜಮಖಂಡಿ		25 000/-
3	ಶ್ರೀ ದುರ್ಗಾ ಪರಮೇಶ್ವರ ದೇವಸ್ಥಾನ, ಅಡಿಗುಡಿ, ಜಮಖಂಡಿ	"	25 000/-
4	ಶ್ರೀ ಬ್ರಹ್ಮದೇವರು, ಸಾವಳಗಿ, ಜಮಖಂಡಿ	"	25 000/-
5	ಶ್ರೀ ಬಸವೇಶ್ವರ ದೇವಸ್ಥಾನ, ಸಡಪಲ್ಲಿ, ಜಮಖಂಡಿ	"	50,000/-
	ಒಟ್ಟು		150 000/-